# ಸಹಾಯವಾಣಿ

**SAHAYAVANI** Kannada Daily, ಕನ್ನಡ ದಿನಪತ್ರಿಕೆ.

RNI:KARKAN/2014/54928,Bengaluru Editor:S.K.Wadeyar, e-mail:sahayavany@gmail.com 9902543494--0803563144, ಸಂಪಾದಕರು:ಎಸ್.ಕೆ.ಒಡೆಯರ್,

ಸಂಪುಟ:೧೦, ಸಂಚಿಕೆ:೧೭೦, ದಿನಾಂಕ:೦೩,ಆಗಸ್ಟ್ ೨೦೨೩, ವಾರ:ಗುರುವಾರ, ಪುಟ:೪, ರೂ:೩/- **Vol:10, Issuse:170, Date:03 August 2023, Thursday, Page:4, Rs:3/-


## ಕ.ರಾ.ಮು.ವಿ ಯಿಂದ ಉಭಯ ಕೋರ್ಸ್ ಗಳ ಅವಕಾಶ: ಪ್ರೊ. ಶರಣಪ್ಪ




ಬೆಂಗಳೂರು ನಗರ ಜಿಲ್ಲೆ, ಆಗಸ್ಟ್ ೦೨: ಇತರೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕ.ರಾ.ಮು.ವಿ.ಯಿಂದ ಉಭಯ ಕೋರ್ಸ್ ಗಳನ್ನು ಮಾಡಲು ಅವಕಾಶ ಕಲ್ಪಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ಅವರು ತಿಳಿಸಿದರು.

ಅವರು ಇಂದು ನಗರದ ಪ್ರೆಸ್ ಕ್ಲಬ್ ನಲ್ಲಿ ಆಯೋಜಿಸಲಾಗಿದ್ದ ೨೦೨೩-೨೪ನೇ ಶೈಕ್ಷಣಿಕ ಸಾಲಿನ ಹೊಸ ಕೋರ್ಸ್ ಗಳ ಹಾಗೂ ಆನ್ ಲೈನ್ ಕೋರ್ಸ್ ಗಳ ಕುರಿತು ಪತ್ರಿಕಾಗೋಷ್ಠಿನ್ನು ಉದೇಶಿಸಿ ಅವರು ಮಾತನಾಡಿದರು.

ಕ.ರಾ.ಮು.ವಿ.ಯು ನ್ಯಾಕ್ ನಿಂದ ಎ+ ಮಾನ್ಯತೆ ಪಡೆದಿದ್ದು, ಪ್ರಸಕ್ತ ಸಾಲಿನಿಂದ ವಿದ್ಯಾರ್ಥಿಗಳ ಬಹು ಬೇಡಿಕೆಯ ಕೋರ್ಸ್ ಗಳಾದ ಬಿ.ಎಸ್.ಡಬ್ಲ್ಯೂ., ಎಂ.ಎಸ್.ಡಬ್ಲ್ಯೂ., ಎಂ.ಸಿ.ಎ., ಎಂ.ಎಸ್ ಸಿ., ( ಡೆಟಾ ಸೈನ್ಸ್) ಹಾಗೂ ೧೦ ಹೊಸ ಆನ್ ಲೈನ್ ಕೋರ್ಸ್ ಗಳ ಪ್ರವೇಶಾತಿಯನ್ನು ಪ್ರಾರಂಭಿಸಲಾಗಿದೆ ಹಾಗೂ ಯು.ಜಿ.ಸಿ ನಿಯಮಾವಳಿ ಪ್ರಕಾರ ಇತರೆ ಕಾಲೇಜಿನಲ್ಲಿ ರೆಗ್ಯುಲರ್ ಆಗಿ ಓದುತ್ತಿರುವ ವಿದ್ಯಾರ್ಥಿಗಳು, ಕಾರಣಾಂತರಗಳಿಂದ ಓದಲು ಆಗದಿದ್ದರೆ ಅಥವಾ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದಿದ್ದರೆ, ಅಂತಹ ವಿದ್ಯಾರ್ಥಿಗಳು ಅರ್ಹತಾ ಮಾನದಂಡಗಳನ್ನು ಪೂರೈಸಿ ೨ನೇ ಅಥವಾ ೩ನೇ ವರ್ಷಕ್ಕೆ ಮುಕ್ತ ವಿ.ವಿ ಯಲ್ಲಿ ಲ್ಯಾಟರಲ್ ಪ್ರವೇಶ ಅಥವಾ ನೇರ ಪ್ರವೇಶ ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ಮುಂದುವರೆಸಬಹುದು ಎಂದರು.

ಕ.ರಾ.ಮು.ವಿ.ಯು ಪ್ರಾದೇಶಿಕ ಕೇಂದ್ರಗಳಲ್ಲಿ ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಮಿಲಿಟರಿ ಸೇವೆಯಲ್ಲಿರುವ/ ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ, ಶೇಕಡ ೧೫ % ಬೋಧನಾ ಶುಲ್ಕದಲ್ಲಿ ರಿಯಾಯಿತಿ ಮತ್ತು ಕೆ.ಎಸ್.ಆರ್.ಟಿ.ಸಿ/ ಬಿ,ಎಂ.ಟಿ.ಸಿ/ ಆಟೋ/ ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ/ ಮಕ್ಕಳಿಗೆ ಯು.ಜಿ ಮತ್ತು ಪಿ,ಜಿಯಲ್ಲಿ ಶೇಕಡ ೨೫% ಬೋಧನಾ ಶುಲ್ಕದಲ್ಲಿ ರಿಯಾಯಿತಿ ಇರುತ್ತದೆ ಎಂದು ತಿಳಿಸಿದರು.

ತೃತೀಯ ಲಿಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಹಾಗೂ ಪ.ಜಾ/ಪ್ರ,ಪ/ ಓ.ಬಿ.ಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್ ಷಿಪ್ ಪೋರ್ಟಲ್ (ಎಸ್.ಎಸ್.ಪಿ) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕ.ರಾ.ಮು.ವಿ., ಬೆಂಗಳೂರು ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳಾದ ದಿಲೀಪ.ಡಿ., ರೋಹಿತ್ ಹೆಚ್.ಎಸ್., ಗಿರೀಶ್ ಹೆಚ್.ಎನ್ ಹಾಗೂ ಶಶಿಕಲಾ ಉಪಸ್ಥಿತರಿದ್ದರು.

## ಫಾಕ್ಸ್ ಕಾನ್ ಸಂಸ್ಥೆಯಿಂದ ರಾಜ್ಯದಲ್ಲಿ ರೂ. ೫,೦೦೦ ಕೋಟಿ ಹೂಡಿಕೆಯೊಂದಿಗೆ ೨ಹೊಸ ಯೋಜನೆಗಳು:ಎಂ.ಬಿ.ಪಾಟೀಲ್



ಫಾಕ್ಸ್ ಕಾನ್ ಸಂಸ್ಥೆ ಈಗಾಗಲೇ ರಾಜ್ಯದಲ್ಲಿ ರೂ. ೧೪,೦೦೦ ಕೋಟಿ ಮೊತ್ತದಲ್ಲಿ ಐಫೋನ್ ತಯಾರಿಕಾ ಘಟಕ ಸ್ಥಾಪಿಸುತ್ತಿದ್ದು, ಇದರ ಜೊತೆಗೆ ರಾಜ್ಯ ಸರ್ಕಾರ ರೂ. ೫,೦೦೦ ಕೋಟಿ ಹೂಡಿಕೆಯ ಎರಡು ಪ್ರಮುಖ ಯೋಜನೆಗಳಿಗೆ ಫಾಕ್ಸ್ ಕಾನ್ ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಸಚಿವರಾದ ಎಂ.ಬಿ.ಪಾಟೀಲರು ತಿಳಿಸಿದ್ದಾರೆ.

ಇತ್ತೀಚೆಗೆ FOXCONN ಸಂಸ್ಥೆಯ CEO ಮತ್ತು ಅಧ್ಯಕ್ಷರಾದ ಶ್ರೀ ಯಂಗ್ ಲಿಯು ಅವರನ್ನು ಭೇಟಿಮಾಡಿ ಫಾಕ್ಸ್ ಕಾನ್ ಯೋಜನೆಗಳ ಕುರಿತು ಫಲಪ್ರದ ಮಾತುಕತೆ ನಡೆಸಲಾಯಿತು. ಈ ವೇಳೆ ಸಚಿವ ಶ್ರೀ ಪ್ರಿಯಾಂಕ್ ಖರ್ಗೆ ಅವರು ಜೊತೆಗಿದ್ದರು.

ಫೋನ್ ಎನ್‌ಕ್ಲೋಷರ್ ಯೋಜನೆ- FII (ಫಾಕ್ಸ್ ಕಾನ್ ನ ಅಂಗ ಸಂಸ್ಥೆ) ವತಿಯಿಂದ ರೂ.೩,೦೦೦ ಕೋಟಿ ಹೂಡಿಕೆ, ೧೨,೦೦೦ ಉದ್ಯೋಗಾವಕಾಶಗಳ ಸೃಷ್ಟಿ

ಅಪ್ಲೈಡ್ ಮೆಟೀರಿಯಲ್ಸ್ ನ ಸಹಯೋಗದೊಂದಿಗೆ ರೂ.೨,೦೦೦ ಕೋಟಿ ಹೂಡಿಕೆಯ ಸೆಮಿಕಂಡಕ್ಟರ್ ಉಪಕರಣಗಳನ್ನು ತಯಾರಿಸುವ ಯೋಜನೆ, ೧,೦೦೦ ಉದ್ಯೋಗಗಳ ಸೃಷ್ಟಿಯಾಗಲಿದೆ ಪಾಟೀಲರುಹೇಳಿದರು

## ಪತ್ರಿಕಾ ದಿನಾಚರಣೆ - ಪತ್ರಕರ್ತರಿಗೆ ಕಾರ್ಯಗಾರ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲಾ ಘಟಕ ಮತ್ತು ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಸಹಯೋಗದಲ್ಲಿ ಪತ್ರಿಕಾ ದಿನಾಚರಣೆ ಹಾಗೂ ಪತ್ರಕರ್ತರಿಗೆ ಕಾರ್ಯಗಾರವನ್ನು ದಿನಾಂಕ ೦೫-೦೮-೨೦೨೩ರ ಶನಿವಾರ ಬೆಳಿಗ್ಗೆ ೧೦-೩೦ ಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಯ ಎಂಬಿಎ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ. ಎಂ. ಮಂಜುನಾಥ್ ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊಫೆಸರ್ ಬಿ.ಕೆ ರವಿ ನೆರವೇರಿಸಲಿದ್ದು. ಅಧ್ಯಕ್ಷತೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ॥ ಬಿ. ಟಿ. ಕುಂಬಾರ ವಹಿಸಲಿದ್ದಾರೆ.

ಡಿಜಿಟಲ್ ಯುಗದಲ್ಲಿ ಪತ್ರಕರ್ತರ ಭವಿಷ್ಯ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ .ವಿ. ಪ್ರಭಾಕರ್ ನೀಡಲಿದ್ದಾರೆ. ಗ್ರಾಮೀಣ ಪತ್ರಕರ್ತರ ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು ಎಂಬ ವಿಷಯದ ಬಗ್ಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಆಗಮಿಸಲಿದ್ದಾರೆ ಎಂದು ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಕುಲಸಚಿವರಾದ ಶ್ರೀಮತಿ ಸರೋಜಾ ಬಿ. ಬಿ, ಡಾ. ಶಿವಶಂಕರ್. ಕೆ, ಹಣಕಾಸು ಅಧಿಕಾರಿ ಪ್ರೊ॥ ಶಶಿಧರ್. ಆರ್ ,ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷ ಇ. ಎಂ.ಮಂಜುನಾಥ್ ,ಚಿತ್ರದುರ್ಗ ಜಿಲ್ಲಾಧ್ಯಕ್ಷ, ಬಿ .ದಿನೇಶ್ ಗೌಡಗೆರೆ , ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಚಿತ್ರದುರ್ಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಸಿದ್ದರಾಜು, ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಡಾ. ವರದರಾಜ್, ಉಪಸ್ಥಿತರಿರುವರು ಎಂದು ಜಿಲ್ಲಾ ಖಜಾಂಚಿ ಎನ್. ವಿ.ಬದರಿನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವ ಪತ್ರಕರ್ತರು ಹೆಚ್ಚಿನ ಮಾಹಿತಿಗಾಗಿ 8660305128, 8494949909, 8618063304, 9844377451, 9945549009 ಸಂಪರ್ಕಿಸಲು ಕೋರಲಾಗಿದೆ.

## ಅನುತ್ತೀರ್ಣ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ೨ನೇ ಬಾರಿ ಅವಕಾಶ

ದಾವಣಗೆರೆ; ಆ. ೨ : ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೆರವಾಗಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ಎರಡನೇ ಬಾರಿಗೆ ವಿಶೇಷ ಪೂರಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ.ಆಗಸ್ಟ್ ೨೧ ರಿಂದ ಸೆಪ್ಟಂಬರ್ ೨ ರವರೆಗೆ ಪರೀಕ್ಷೆಗಳು ಜರುಗಲಿದ್ದು, ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಆಗಸ್ಟ್ ೧೦ ರೊಳಗಾಗಿ ಕಾಲೇಜು ಲಾಗಿನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸುವ ಮೂಲಕ ನೊಂದಣಿ ಮಾಡಿಕೊಳ್ಳಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಪ್ರಥಮ ಬಾರಿಗೆ ೨೦೦ ಯೂನಿಟ್ ವರೆಗೆ ಉಚಿತ ವಿದ್ಯುತ್ ಯೋಜನೆ ಆ ೧೫,ಕಲಬುರಗಿಯಲ್ಲಿ ಸಿ.ಎಂ.ಚಾಲನೆ




ಸರ್ವರನ್ನು ಒಳಗೊಂಡ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಪರ ಅಭಿವೃದ್ಧಿ ನಮ್ಮ ಸರ್ಕಾರದ ಧ್ಯೇಯ.. ಬದಲಾವಣೆ ಬೆಳಕು ಬಂದಿದೆ.

ರಾಜ್ಯದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ೨೦೦ ಯೂನಿಟ್ ವರೆಗೆ ಉಚಿತ ವಿದ್ಯುತ್ ಯೋಜನೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಚಾಲನೆ ಕಲಬುರಗಿಯಲ್ಲಿ ನೀಡಲಿದ್ದಾರೆ.

೦೫-೦೮-೨೦೨೩ ಮಂಗಳವಾರ ಸಮಯ: ಬೆಳಗ್ಗೆ ೧೧-೦೦ ಗಂಟೆ ಸ್ಥಳ: ಎನ್ ವಿ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ.

## ತೋಟಗಾರಿಕೆ ಇಲಾಖೆಯ ಮನರೇಗಾ ಕಾಮಗಾರಿ ಪರಿಶೀಲನೆ



ಮಂಡ್ಯ:ಜಿಲ್ಲಾ ಪಂಚಾಯತ್ ಮುಖ್ಯ, ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸೀಫ್ ಅವರು ಇಂದು ಮಂಡ್ಯ, ಮದೂರು ಮತ್ತು ಮಳವಳ್ಳಿ, ತಾಲೂಕುಗಳಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ೨೦೨೧-೨೨ ಮತ್ತು, ೨೦೨೨-೨೩ ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಮನರೇಗಾ ಯೋಜನೆಯ ಕಾಮಗಾರಿಗಳ ಸಾಮಾಗ್ರಿ ಮೊತ್ತದ( FTO) ಗಳ ತಾಕು ಪರಿಶೀಲನೆ ನಡೆಸಿದರು.

ಮನರೇಗಾ ಯೋಜನೆಯಡಿ ಸಾಮಾಗ್ರಿ ವೆಚ್ಚ ಪಾವತಿಗೂ ಮುನ್ನ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಖುದ್ದು ಭೇಟಿ ನೀಡಿವ ಪರಿಶೀಲನೆ ನಡೆಸಿದರು. ಇದೇ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ರೂಪಶ್ರೀ ಉಪಸ್ಥಿತರಿದ್ದರು.

ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ಬೇಲೂರು ಗ್ರಾಮ ಪಂಚಾಯಿತಿಯ, ವೈ ಯರಹಳ್ಳಿ ಗ್ರಾಮದ ಶ ಜಯಲಕ್ಷ್ಮಿ ಅವರ ಗುಲಾಬಿ ಬೆಳೆ ಪ್ರದೇಶ ವಿಸ್ತರಣೆ ತಾಕನ್ನು ವೀಕ್ಷಿಸಿದರು.ಸದರಿ ಬೆಳೆಯನ್ನು ೦.೪ ಡೇ ಪ್ರದೇಶದಲ್ಲಿ, ಬೆಳೆದಿದ್ದು, ಸಾಮಾಗ್ರಿ ಮೊತ್ತ ರೂ, ೨೦೦೦೦/- ಗಳು ಪಾವತಿಯಾಗಬೇಕಿರುತ್ತದೆ.

ಕಸಬಾ ಹೋಬಳಿ ಕನ್ನಲಿ ಗ್ರಾಮ ಪಂಚಾಯಿತಿಯ ಕಾಗೇಹಳ್ಳದದೊಡ್ಡಿ ಗ್ರಾಮಕ್ಕೆ ಭೇಟಿ ನೀಡಿ ಸದರಿ ಗ್ರಾಮದಲ್ಲಿ, ಬೊಮ್ಮೇಗ್ ರವರ ಜಮೀನಿನಲ್ಲಿ. ೦.೧೪ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಡ್ರಾಗನ್ ಫ್ರೂಟ್ ಬೆಳೆಯನ್ನು ವೀಕ್ಷಿಸಿದರು, ಸದರಿ ಕಾಮಗಾರಿಯ ಸಾಮಾಗ್ರಿ ಮೊತ್ತ ರೂ. ೨೯೨೦/- ಗಳ ಪಾವತಿಯಾಗಬೇಕಾಗಿರುವುದನ್ನು ಪರಿಶಿಲಿಸಿದರು,


ಮದ್ದೂರು ತಾಲೂಕಿನಲ್ಲಿ ೨೦೨೨-೨೩ ನೇ ಸಾಲಿನಲ್ಲಿ, ಅಂಗಾಂಶ ಬಾಳೆ ನಾಟಿ ಮಾಡಿದ ಮದ್ದೂರು ತಾಲೂಕು, ಕುದುರೆಗುಂಡಿ ಗ್ರಾಮದ ಸುಶೀಲಮ್ಮ ರವರ ತಾಕಿಗೆ ಭೇಟಿ ನೀಡಿ ಪರಿಶೀಲಿಸಿದರು, ಈವರೆವಿಗೂ ರೈತರಿಗೆ ರೂ. ೯೨೧೬/-ಗಳ ಕೂಲಿ ಮೊತ್ತ ಪಾವತಿಯಾಗಿರುವುದನ್ನು ಗಮನಿಸಿ ಸಾಮಾಗ್ರಿ ವೆಚ್ಚ ರೂ., ೧೬೦೦೫/- ಗಳು ಬಾಕಿ ಇರುವುದನ್ನು , ರೈತರೊಂದಿಗೆ ಚರ್ಚಿಸಿದರು.

೨೦೨೨-೨೩ ನೇ ಸಾಲಿನಲ್ಲಿ ತೆಂಗು ನಾಟಿ ಮಾಡಿದ, ದೇವೇಗೌಡನದೊಡ್ಡಿ ಗ್ರಾಮದ ನಾಗರತ್ನಮ್ಮ ರವರ ತಾಕಿಗೆ ಭೇಟಿ ನೀಡಿದರು. ಇವರಿಗೆ ರೂ. ೩೮೩೧೬/- ಗಳ ಕೂಲಿ ಮಾತ್ರ ಪಾವತಿಯಾಗಿದ್ದು, ರೂ., ೮೪೦೦/- ಗಳ ಸಾಮಾಗ್ರಿ ಮೊತ್ತ ಬಾಕಿ ಇರುವುದನ್ನು ಪರಿಶೀಲಿಸಿದರು,

## ಶೋಷಿತ ಸಮುದಾಯದ ಮೇಲೆ ನಡೆಯುತ್ತಿರುವ ಕೃತ್ಯ ಗಳ ಬಗ್ಗೆ ಸರ್ಕಾರ ತಕ್ಷಣ ವೇ ಕಾನೂನುಬದ್ದ ಕ್ರಮಕ್ಯಗೊಳ್ಳಲು ಒತ್ತಾಯಿಸಿ ರಾಜ್ಯಪಾಲರಿಗೆ ಭೇಟಿಮಾಡಿ ದೂರುಸಲ್ಲಿಕೆ



ಕರ್ನಾಟಕ ದಲಿತ ಸಂಘರ್ಷ ಸಮಿತಿ, ಭೀಮಬಾದ ದ ರಾಜ್ಯ ಸಂಘಟನಾ ಸಂಚಾಲಕ, ಮತ್ತು ರಾಮನಗರ ನ್ಯೂಸ್ ಕನ್ನಡ ದಿನಪತ್ರಿಕೆಯ ಸಂಪಾದಕ ಡಿ. ನಾರಾಯಣ್ ನೇತೃತ್ವದಲ್ಲಿ, ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋಟ್ ರವರನ್ನು ದಿನಾಂಕ : ೨-೮-೨೦೨೩ ರಂದು ರಾಜಭವನದಲ್ಲಿ ಭೇಟಿ ಮಾಡಿ, ಮಣಿಪಾಲ್ ನಲ್ಲಿ ನಡೆದಿರುವ ಅಮಾನುಷ ಕೃತ್ಯದ ಬಗ್ಗೆ ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಮತ್ತು ರಾಜ್ಯದ ಶೋಷಿತ ಸಮುದಾಯದ ಮೇಲೆ ನಡೆಯುತ್ತಿರುವ ಕೃತ್ಯ ಗಳ ಬಗ್ಗೆ ಸರ್ಕಾರ ತಕ್ಷಣ ವೇ ಕಾನೂನುಬದ್ದ ಕ್ರಮಕ್ಯಗೊಳ್ಳಲು ಮುಂದಾಗಬೇಕು ಮತ್ತು ಸಂವಿಧಾನದ ನಾಲ್ಕನೇ ಅಂಗ ಪತ್ರಿಕರಂಗದ ರೂವಾರಿ, ಮುಖ್ಯಮಂತ್ರಿ ಯ ಜವಾಬ್ದಾರಿ ಖಾತೆ ವಾರ್ತಾ ಇಲಾಖೆಯ ದಾಖಲಾತಿಗಳನ್ನು ನೀಡಿ, ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ದ ಹಗರಣ ಗಳನ್ನು, ಪಾರದರ್ಶಕ ತನಿಖೆ ನಡೆಸಿ, ಭ್ರಷ್ಟ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕೆಂದು ಮನವಿ ನೀಡಿ ಒತ್ತಾಯಿಸಲಾಯಿತು. ಇದಕ್ಕೆ ಸ್ಪಂದಿಸಿದ ಮಾನ್ಯ ರಾಜ್ಯಪಾಲರು ಸಂಬಂದಿಸಿದ ಅಧಿಕಾರಿಗಳ ಗಮನಕ್ಕೆ ತಂದು ಕ್ರಮಕೈಗೊಳ್ಳುವುದಾಗಿ, ಭರವಸೆ ನೀಡಿದರು.

ಸಹಾಯವಾಣಿ



# ದುರ್ಬಲ ವರ್ಗದವರಿಗೆ ಉದ್ಯೋಗ ಚೀಟಿ ನೀಡಿ:ಪ್ರಕಾಶ ವಿ



ರಾಯಚೂರು,ಆ.೦೨:– ಜಿಲ್ಲೆಯ ಗ್ರಾಪಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಎಫ್.ಟಿ, ಜಿಕೆಎಂ ಹಾಗೂ ತಾಂಡಾ ರೋಜಗಾರ ಮಿತ್ರಗಳಿಗೆ ಪ್ರಗತಿ ಪರಿಶೀಲನೆಯಲ್ಲಿ ನರೇಗಾ ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಗುಣಮಟ್ಟದ ಕಾಮಗಾರಿಗಳನ್ನು ದಾಖಲೀಕರಣ ಮಾಡುವುದು, ಉದ್ಯೋಗ ಚೀಟಿಗಳು ಇಲ್ಲದ ಕುಟುಂಬಗಳನ್ನು ಗುರುತಿಸಿ ಅವರಿಗೆ ಹೊಸ ಉದ್ಯೋಗ ಚೀಟಿಗಳನ್ನು ನೀಡಲು ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಪ್ರಕಾಶ ವಿ ಅವರು ಹೇಳಿದರು.

ಅವರು ಆ.೦೨ರ(ಬುಧವಾರ) ನಗರದ ಜಿಲ್ಲಾ ಪಂಚಾಯತ್ ಸಂಭಾಗಣದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಲ ಸಂಜೀವಿನ ಕಾರ್ಯಕ್ರಮದಡಿ ಜಿಪಿಎಸ್ (ಗ್ರಾಮ ಪರಿಸರ ಅಭಿವೃದ್ಧಿ ಸಮಿತಿ) ಹಾಗೂ ಸಿಎಲ್‌ಎಮ್ (ಕಾಮನ್ ಲ್ಯಾಂಡ್ ಮಾಪಿಂಗ್ ಮತ್ತು ಗ್ರಾಮ ಪಂಚಾಯತಿ ಆಸೆಟ್ ರಿಜಿಸ್ಟರ್ ನಲ್ಲಿ, ಸಾಮೂಹಿಕ ಆಸ್ತಿ ಮಾಹಿತಿ ದಾಖಲೀಕರಣ ಮಾಡುವ ಕುರಿತು ಒಂದು ದಿನದ ತರಬೇತಿ ಕಾರ್ಯಗಾರ ನೇತೃತ್ವದಲ್ಲಿ ಪ್ರಗತಿ ಪರಿಶೀಲನೆ ಸಭೆಯನ್ನುದ್ದೇಶಿಸಿ ಮಾತನಾಡಿದರು.

ದುರ್ಬಲ ವರ್ಗದವರಿಗೆ ನರೇಗಾ ಯೋಜನೆಯ ಸೌಲಭ್ಯಗಳನ್ನು ನೀಡುವ ಕೆಲಸವಾಗಬೇಕೆಂದರು. ಎನ್.ಎಂ.ಎಂ.ಎಸ್ ಹಾಜರಾತಿ, ಕಾಮಗಾರಿ ಕಡತ/ಎಳು ವಹಿಗಳ ಕಡತಗಳ ನಿರ್ವಹಣೆ, ನಮೂನೆ ೦೬ ಅರ್ಜಿ ಸಲ್ಲಿಕೆ ಗ್ರಾಮದಲ್ಲಿರುವ ಜನಗಣತಿ, ಎಸ್ಸಿ, ಎಸ್ಟಿ, ಮಹಿಳಾ ಕೂಲಿಕಾರರ ಮಾಹಿತಿಗಳನ್ನು ತಿಳಿದುಕೊಂಡಿರಬೇಕು ಎಂದರು.

ಮನೆ ಮನೆಗೆ ಭೇಟಿ ನೀಡಿ ನರೇಗಾದಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಗ್ರಾಮಸ್ಥರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಕೂಲಿಕಾರರಿಗೆ ಅಳತೆಗೆ ತಕ್ಕಂತೆ ಕೂಲಿ ಮೊತ್ತ ಪಾವತಿಯಾಗುವ ವಿವರವನ್ನು ತಿಳಿಸಬೇಕು. ಇನ್ನೂ ೧೭೭ ಗ್ರಾಪಂಗಳಲ್ಲಿ ಶಿಶುಪಾಲನಾ ಕೇಂದ್ರವನ್ನು ಸ್ಥಾಪಿಸಲು ಸೂಕ್ತವಾದ ಕಟ್ಟಡಗಳನ್ನು ಗುರುತಿಸುವುದು, ಮತ್ತು ಮಕ್ಕಳ ಕಾಳಜಿವಹಿಸಲು ಪ್ರತಿ ಒಂದು ಕೇಂದ್ರಕ್ಕೆ ೯ ರಿಂದ ೧೦ ಮಹಿಳಾ ಕೂಲಿಕಾರರು (ಕೇರ್ ಟೇಕರ್)ಗಳನ್ನು ಆಯ್ಕೆ ಮಾಡಲು ಸೂಚಿಸಿದರು. ನಂತರ ಸ್ವಸಹಾಯ ಸಂಘದ ಮಹಿಳೆಯರಿಗೆ ನರೇಗಾ ಯೋಜನೆಯಲ್ಲಿ ಉದ್ಯೋಗ ಚೀಟಿಗಳನ್ನು ನೀಡಿ ಅವರಿಗೂ ಅದರಲ್ಲಿ ಆದಾಯ ಬರುವುದರಿಂದ ಕುಟುಂಬಕ್ಕೆ ಶಕ್ತಿ ತುಂಬಿದಂತೆಯಾಗುವುದು ಎಂದರು. ಸ್ವಚ್ಛತ ಸರ್ವೇಕ್ಷಣಾ ಅಭಿಯಾನವನ್ನು ಕೈಗೊಂಡು ಗ್ರಾಮದಲ್ಲಿಸ್ವಚ್ಛತೆಯನ್ನು ಕಾಪಾಡಲು ಸಂಬಂಧಪಟ್ಟ ಬಿ.ಎಫ್.ಟಿ, ಜಿಕೆಎಂ ಹಾಗೂ ತಾಂಡಾ ರೋಜಗಾರ ಮಿತ್ರಗಳಿಗೆ ಪ್ರಗತಿ ಪರಿಶೀಲನೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಾಯಕ ಸಮನ್ವಯ ಅಧಿಕಾರಿ, ಅಕೌಂಟ್ ಮ್ಯಾನೇಜರ್, ಐಇಸಿ ಸಂಯೋಜಕರು ಮತ್ತು ಕಛೇರಿ ಸಿಬ್ಬಂದಿಗಳು ಇದ್ದರು.

# ಮಂಡ್ಯ ನಗರಸಭೆ ಯು.ಜಿ.ಡಿ ಕಾಮಗಾರಿಗೆ ೨೫೦ಕೋಟಿ ರೂ ಅನುದಾನ ಬಿಡುಗಡೆಗೆ ಕೃಷಿ ಸಚಿವರ ಮನವಿ



ದೇಹಲಿ:ಅಮೃತ್ ಯೋಜನೆಯಡಿ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಯುಜಿಡಿ ನಿರ್ಮಾಣಕ್ಕೆ ೨೫೦ ಕೋಟಿ ರೂ ಅನುದಾನ ಒದಗಿಸುವಂತೆ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರು ಇಂದು ನವ ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಸತಿ ಹಾಗೂ ನಗರಾಭಿವೃದ್ಧಿ ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ಮನವಿ ಮಾಡಿದರು.

ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನೊಂದಿಗೆ ಯು.ಜಿ.ಡಿ ನೀರು ಮಿಶ್ರಣವಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದ್ದು, ಆದ್ಯತೆ ಮೇರೆಗೆ ಸದರಿ ಕೆಲಸವನ್ನು ಮಾಡಿಕೊಡುವಂತೆ ಕೇಂದ್ರ ಸಚಿವರಲ್ಲಿ ಕೋರಿಕೆ ಸಲ್ಲಿಸಿದರು.

ಅಟಲ್ ಮಿಷನ್ ಯೋಜನೆಯಡಿ ಮೊದಲ ಹಂತದಲ್ಲಿ ೧೧೪.೪೮ ಕೋಟಿ ರೂ ಮಂಜೂರು ಮಾಡಲಾಗಿದ್ದು, ಮಂಡ್ಯ ನಗರಸಭೆ ವ್ಯಾಪ್ತಿಯ ೩೫ ವಾರ್ಡ್‌ಗಳ ಪೈಕಿ ೧೨ ವಾರ್ಡ್‌ಗಳಿಗೆ ೨೪ ಘ೭ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಇನ್ನುಳಿದ ೨೩ ವಾರ್ಡ್‌ಗಳಿಗೆ ೨೪ ಘ೭ ಕುಡಿಯುವ ನೀರು ಸರಬರಾಜು ಕಾಮಗಾರಿ ಕೈಗೊಳ್ಳಲು ೧೦೦ ಕೋಟಿ ರೂ ಅನುದಾನದ ಅವಶ್ಯಕತೆ ಇರುತ್ತದೆ.

ಮಂಡ್ಯ ನಗರವು ಬೆಂಗಳೂರು ಮತ್ತು ಮೈಸೂರು ಜಿಲ್ಲೆಯ ಮಧ್ಯದಲ್ಲಿದ್ದು, ಪ್ರಮುಖ ನಗರವಾಗಿರುತ್ತದೆ. ಇಲ್ಲಿ ವಾಸವಾಗಿರುವ ಜನರಿಗೆ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿಕೊಡುವಂತೆ ಕೇಂದ್ರ ಸಚಿವರಿಗೆ ಬರೆದಿರುವ ಪತ್ರವನ್ನು ಸಚಿವರು ಸಲ್ಲಿಸಿದರು

# ದಾವಣಗೆರೆ.ನೂತನ KSRTC ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರಿಡುವಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಿಪಿಐ ನಿಂದ ಮನವಿ.

ದಾವಣಗೆರೆ ಜುಲೈ ೩೦– ದಾವಣಗೆರೆಯಲ್ಲಿ ನೂತನವಾಗಿ ನಿರ್ಮಿಸಿರುವ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣಕ್ಕೆ ಮಾಜಿ ಶಾಸಕರಾಗಿದ್ದ ಕಾಂ .ಪಂಪಾಪತಿ ಅವರ ಹೆಸರಿಡುವಂತೆ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಸಚಿವರು ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್ ಎಸ್ ಮಲ್ಲಿಕಾರ್ಜುನ ರವರಿಗೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರು ಆದ ಶ್ರೀ ಡಾ.ಶಾಮನೂರು ಶಿವಶಂಕರಪ್ಪನವರಿಗೆ ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಮಂಡಳಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಭಾನುವಾರ ಸಚಿವರ ನಿವಾಸಕ್ಕೆ ಪಕ್ಷದ ನಿಯೋಗದೊಂದಿಗೆ ತೆರಳಿ ಭೇಟಿ ಮಾಡಿದ ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ ಆವರಗೆರೆ ಚಂದ್ರು ಪಂಪಾಪತಿಯವರು ನಗರಕ್ಕೆ ಮತ್ತು ಜಿಲ್ಲೆಗೆ ನೀಡಿದ ಕೊಡುಗೆ ಮತ್ತು ಸೇವೆಯನ್ನು ಪರಿಗಣಿಸಿ ನೂತನ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣಕ್ಕೆ ಕಾಂ ಪಂಪಾಪತಿ ಯವರ ಹೆಸರಿಡುವಂತೆ ನಿಯೋಗದೊಂದಿಗೆ ಸಚಿವರ ಗಮನಕ್ಕೆ ತಂದರು, ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರಾದ ಶ್ರೀ ಎಸ್ ಎಸ್ ಮಲ್ಲಿಕಾರ್ಜುನ್ ರವರು ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು ಮಾಜಿ ಸಚಿವರು ಆದ ಶ್ರೀ ಶಾಮನೂರು ಶಿವಶಂಕರಪ್ಪನವರು ಮಾಜಿ ಶಾಸಕರಾದ ಪಂಪಾಪತಿ ಅವರ ಹೆಸರಿಡಲು ಪರಿಶೀಲಿಸುವುದಾಗಿ ನಿಯೋಗಕ್ಕೆ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಖಜಾಂಚಿ ಕಾಂ .ಆನಂದರಾಜ್ ಪಕ್ಷದ ಸಹಕಾರ್ಯದರ್ಶಿಗಳಾದ ಕಾಂ ಹೆಚ್ ಜಿ ಉಮೇಶ್ ಅವರಗೆರೆ ವಾಸು ರವರು ಉಭಯತರಿಗೂ ಪುಷ್ಪ ಹಾರ ಮತ್ತು ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಹೋರಾಟದ ಇತಿಹಾಸ ಕುರಿತ ಪುಸ್ತಕ ನೀಡಿ ಸಚಿವರು ಮತ್ತು ಶಾಸಕರನ್ನು ಸನ್ಮಾನಿಸಿದರು.

ಸಚಿವರ ನಿವಾಸಕ್ಕೆ ತೆರಳಿದ ಪಕ್ಷದ ನಿಯೋಗದಲ್ಲಿ ಪಿಎಲ್ ನಾಗೇಂದ್ರ, ಎ ತಿಪ್ಪೇಶ್, ನರೇಗಾ ರಂಗನಾಥ್, ಎನ್ ಹೆಚ್ ರಾಮಣ್ಣ ,ಮಹೇಶ್, ಎಂ ಬಿ ಶಾರದಮ್ಮ, ಪಿ ಷಣ್ಮುಖ ಸ್ವಾಮಿ ,ವಿಶಾಲಾಕ್ಷಿ ,ಸರೋಜಾ, ನಿರ್ಮಲ, ಎಸ್ ಎಸ್ ಮಲ್ಲಮ್ಮ, ಬೆಳಲಗೆರೆ ರುದ್ರಮ್ಮ ,ಎಚ್‌ಎಸ್ ಚಂದ್ರು, ಈ ಎಸ್ ಉಮೇಶ್, ನೇತ್ರಾವತಿ ,ಚಿನ್ನಪ್ಪ, ನಿಟವಳ್ಳಿ ಬಸವರಾಜ, ಎ ಮರಿಯಪ್ಪ ಸೇರಿದಂತೆ ಇತರರು ನಿಯೋಗದಲ್ಲಿದ್ದರು.

# ಗೃಹ ಜ್ಯೋತಿ ಯೋಜನೆಗೆ ಸಿ.ಎಂ. ಸಿದ್ದರಾಮಯ್ಯ ಅವರಿಂದ ಆ.೫ ರಂದು ಕಲಬುರಗಿಯಲ್ಲಿ ಚಾಲನೆ ಕಾರ್ಯಕ್ರಮ ಯಶಸ್ವಿಗೊಳಿಸಲು ಡಿ.ಸಿ. ಫೌಜಿಯಾ ತರನ್ನುಮ್ ಕರೆ



ಕಲಬುರಗಿ,ಆ.೨: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ಆಗಸ್ಟ್ ೫ ರಂದು ಕಲಬುರಗಿಯಲ್ಲಿ ರಾಜ್ಯ ಸರ್ಕಾರದ ೫ ಪ್ರಮುಖ ಗ್ಯಾರಂಟಿ ಯೋಜನೆಗಳ ಪೈಕಿ ಒಂದಾದ ಮಹತ್ವದ ಗೃಹ ಜ್ಯೋತಿ ಯೋಜನೆಗೆ ಚಾಲನೆ ನೀಡಲಿದ್ದು, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನಮ್ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕರೆ ನೀಡಿದರು.

ಬುಧವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಗೃಹ ಜ್ಯೋತಿ ಯೋಜನೆ ಅನುಷ್ಠಾನ ಕಾರ್ಯಕ್ರಮ ಕುರಿತಂತೆ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಅಂದು ಕಲಬುರಗಿ ನಗರದ ಎನ್.ವಿ. ಮೈದಾನದಲ್ಲಿ ಬೆಳಿಗ್ಗೆ ೧೧ ಗಂಟೆಗೆ ೧೦ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಶೂನ್ಯ ದರದ ವಿದ್ಯುತ್ ಬಿಲ್ಲು ನೀಡುವ ಮೂಲಕ ಮುಖ್ಯಮಂತ್ರಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಈ ಸಮಾರಂಭಕ್ಕೆ ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಡಾ.ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇಂಧನ ಸಚಿವ ಕೆ.ಜೆ. ಜಾರ್ಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ–ಬಿ.ಟಿ. ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ. ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಸೇರಿದಂತೆ ನೆರೆಹೊರೆಯ ಐದಾರು ಜಿಲ್ಲೆಗಳ ಸಚಿವರು ಕಾರ್ಯಕ್ರಮಲ್ಲಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಸುಮಾರು ೧೦ ರಿಂದ ೧೨ ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದ್ದು, ಕುಳಿತುಕೊಳ್ಳಲು ಆಸನ, ಊಟ ಹಾಗೂ ನೀರಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಈ ಸಂಬಂಧ ನೇಮಿಸಲಾದ ವಿವಿಧ ಸಮಿತಿಯ ನೋಡಲ್ ಅಧಿಕಾರಿಗಳಿಗೆ ಸೂಚಿಸಿದರು.

ವೇದಿಕೆಯನ್ನು ಆಕರ್ಷಕವಾಗಿ ನಿರ್ಮಿಸಬೇಕು. ಸಾರ್ವಜನಿಕರು, ಗಣ್ಯರು ಮುಂತಾದವರು ಕಾರ್ಯಕ್ರಮದ ಸ್ಥಳ ಪ್ರವೇಶಿಸುವುದಕ್ಕೆ ಪ್ರತ್ಯೇಕ ಪ್ರವೇಶ ಕಲ್ಪಿಸಬೇಕು. ಕಾರ್ಯಕ್ರಮದ ಸ್ಥಳದಲ್ಲಿ ಮುನ್ನೆಚ್ಚರಿಕೆಯಾಗಿ ಅಂಬ್ಯುಲೆನ್ಸ್ ಮತ್ತು ಅಗ್ನಿಶಾಮಕ ವಾಹನಗಳ ವ್ಯವಸ್ಥೆ ಮಾಡಿರಬೇಕು. ಪೊಲೀಸರು ಅಗತ್ಯ ಭದ್ರತೆ ಕೈಗೊಳ್ಳಬೇಕು. ಯಾವುದೇ ಸಮಸ್ಯೆ ಇಲ್ಲದಂತೆ ನಿರ್ವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮ ಯಶಸ್ಸಿಗೆ ಅಧಿಕಾರಿಗನ್ನೊಳಗೊಂಡ ೧೪ ಸಮಿತಿಗಳನ್ನು ರಚಿಸಿದ್ದು, ಸಮಿತಿ ಸದಸ್ಯರಿಗೆ ನೀಡಲಾದ ಕೆಲಸಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಅವರು ಸೂಚಿಸಿದರು. ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ), ಲೋಕೋಪಯೋಗಿ, ಪೊಲೀಸ್, ಕಲಬುರಗಿ ಮಹಾನಗರ ಪಾಲಿಕೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕೆಲಸ ಮಾಡಬೇಕೆಂದು ಅವರು ಸಲಹೆ ನೀಡಿದರು.

ಸಭೆಯಲ್ಲಿ ಹಾಜರಿದ್ದ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಪಾಂಡ್ವೆ ಅವರು ಸಮಾರಂಭದ ಸಿದ್ಧತೆ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಕಲಬುರಗಿ ನಗರ ಪೊಲೀಸ್ ಆಯುಕ್ತ ಚೇತನ್ ಆರ್. ಡಿ.ಸಿ.ಪಿ ಅಡ್ಡೂರು ಶ್ರೀನಿವಾಸಲು, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಭುವನೇಶ ಪಾಟೀಲ ದೇವಿದಾಸ್, ಕೆ.ಕೆ.ಆರ್.ಟಿ.ಸಿ. ಎಂ.ಡಿ. ರಾಚಪ್ಪ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ಸ್ವಾತಂತ್ರ್ಯೋತ್ಸವವನ್ನು ಪ್ರತಿವರ್ಷದಂತೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ



ಬೆಳಗಾವಿ, ಆ.: ಈ ಬಾರಿಯ ಸ್ವಾತಂತ್ರ್ಯೋತ್ಸವವನ್ನು ಪ್ರತಿವರ್ಷದಂತೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ತಿಳಿಸಿದರು.

ಸ್ವಾತಂತ್ರ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಂಗಳವಾರ (ಆ.೧) ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂದು ಬೆಳಿಗ್ಗೆ ೯ ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ನೆರವೇರಿಸಿ ಸಾರ್ವಜನಿಕರಿಗೆ ಸಂದೇಶವನ್ನು ನೀಡಲಿದ್ದಾರೆ.

ಪ್ರತಿವರ್ಷದಂತೆ ಅಂದು ಎಲ್ಲ ಧಾರ್ಮಿಕ ಕೇಂದ್ರದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಲಾಗುವುದು ಎಂದು ಹೇಳಿದರು.

ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ಯೋಧರು, ಜನಪ್ರತಿನಿಧಿಗಳು, ಗಣ್ಯರು ಹಾಗೂ ಸಾರ್ವಜನಿಕರು ಸೇರಿದಂತೆ ಎಲ್ಲರಿಗೂ ಸಮರ್ಪಕವಾಗಿ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು. ಎಲ್ಲ ಸರಕಾರಿ ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಬೇಕು. ಪ್ರತಿಯೊಂದು ಇಲಾಖೆಯವರು ತಮ್ಮ ಇಲಾಖೆಯಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಜಿಲ್ಲಾ ಕ್ರೀಡಾಂಗಣದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.

ವ್ಯಾಪಾರ ಮಳಿಗೆಗಳಿಗೂ ವಿದ್ಯುತ್ ದೀಪಾಲಂಕಾರ ಮಾಡುವ ಮೂಲಕ ಸಂಭ್ರಮದ ವಾತಾವರಣವನ್ನು ಸೃಷ್ಟಿಸಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.ಮಕ್ಕಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಬಸ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

ಪೊಲೀಸ್ ಇಲಾಖೆಯು ಪರೇಡ್ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಉಳಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳ ತಂಡಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಿ ಸಜ್ಜುಗೊಳಿಸಬೇಕು.ಅದೇ ರೀತಿ ಸಂಜೆ ಕುಮಾರ್ ಗಂಧರ್ವ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ವಿವರಿಸಿದರು.

ಸ್ವಾತಂತ್ರ್ಯೋತ್ಸವ ಸಮಾರಂಭ ನಡೆಯುವ ವೇಳೆ ಅಗತ್ಯ ವೈದ್ಯಕೀಯ ವ್ಯವಸ್ಥೆಯನ್ನು ಮಾಡಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಪ್ಲಾಸ್ಟಿಕ್ ಧ್ವಜ ಬಳಕೆಗೆ ನಿರ್ಬಂಧ:**

ಪ್ಲ್ಯಾಸ್ಟಿಕ್ ಧ್ವಜ ಬಳಕೆಯನ್ನು ನಿರ್ಬಂಧಿಸಲಾಗಿರುತ್ತದೆ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಖಾದಿ ಬಟ್ಟೆಯ ಧ್ವಜವನ್ನು ಬಳಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚನೆ ನೀಡಿದರು.ಅದೇ ರೀತಿ ಅಲಂಕಾರಕ್ಕೂ ಕೂಡ ಪ್ಲ್ಯಾಸ್ಟಿಕ್ ವಸ್ತುಗಳನ್ನು ಬಳಕೆ ಮಾಡದೇ ಮರುಬಳಕೆಗೆ ಸಾಧ್ಯವಾಗುವಂತಹ ಕಾಗದ ಅಥವಾ ಬಟ್ಟೆಯನ್ನು ಬಳಸಬೇಕು ಎಂದು ಹೇಳಿದರು.

**ಗಣ್ಯರ ಸಲಹೆಗಳು:**

ಸಭೆಯಲ್ಲಿ ಮಾತನಾಡಿದ ಹಿರಿಯ ಪತ್ರಕರ್ತ ಅರವಿಂದ ದೇಶಪಾಂಡೆ ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ನರಗುಂದ ಬಾಬಾಸಾಹೇಬ್ ದಂಪತಿಯ ಸಮಾಧಿ ಸಿಪಿಎಡ್ ಮೈದಾನದ ಬಳಿ ಇದ್ದು, ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಅವರ ಸಮಾಧಿಗೆ ಗೌರವ ಸಲ್ಲಿಸಬೇಕು ಎಂದು ಸಲಹೆ ನೀಡಿದರು.ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ವಿಕಾಸ ಕಲಘಟಗಿ ಅವರು ಪ್ಲಾಸ್ಟಿಕ್ ಧ್ವಜವನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು.

ಶ್ರೀನಿವಾಸ್ ತಾಳೂರಕ ಮಾತನಾಡಿ, ಇತತೀಚೆಗೆ ಕೋಟೆ ಕೆರೆಯಲ್ಲಿ ಮುಳುಗುತ್ತಿದ್ದ ಮಹಿಳೆಯನ್ನು ರಕ್ಷಿಸಿದ ಪೊಲೀಸ್ ಪೇದೆ ಸೇರಿದಂತೆ ಅತ್ಯುತ್ತಮ ಕೆಲಸ ಮಾಡಿದ ಸಾರ್ವಜನಿಕರನ್ನು ಗುರುತಿಸಿ ಸನ್ಮಾನಿಸಬೇಕು ಎಂದು ಆಗ್ರಹಿಸಿದರು.ಮುಖಂಡರಾದ ಮಲ್ಲೇಶ್ ಚೌಗಲೆ ಅವರು ಮಾತನಾಡಿ, ಸ್ವಾತಂತ್ರ್ಯ ಯೋಧರನ್ನು ಗೌರವಿಸಬೇಕು ಎಂದು ಮನವಿ ಮಾಡಿಕೊಂಡರು.

ಆಗಸ್ಟ್ ೧೫ ರಂದು ಸಂಜೆ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಯಲ್ಲಪ್ಪ ಹುದಲಿ ಅವರು ಸಭೆಯಲ್ಲಿ ವಿನಂತಿಸಿದರು.ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಲ್ ಭೋಯರ್, ಅಪರ ಜಿಲ್ಲಾಧಿಕಾರಿ ವಿಜಯಕುಮಾರ್ ಹೊನಕೇರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಅಶೋಕ ದುಡಗುಂಟಿ ಉಪಸ್ಥಿತರಿದ್ದರು.

# ಆಡಿಯೋ, ವೀಡಿಯೋ ಎಡಿಟಿಂಗ್ ತರಬೇತಿ ಕಾರ್ಯಾಗಾರ

ಬೆಂಗಳೂರು ನಗರ ಜಿಲ್ಲೆ, ಆಗಸ್ಟ್ ೦೨: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಆಡಿಯೋ, ವೀಡಿಯೋ ಎಡಿಟಿಂಗ್ ತರಬೇತಿ ಕಾರ್ಯಾಗಾರವನ್ನು ಆಗಸ್ಟ್ ೨೯ ರಿಂದ ಸೆಪ್ಟೆಂಬರ್ ೦೨ ೨೦೨೩ರವರೆಗೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಉಪನ್ಯಾಸಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಯು.ಆರ್.ರಾವ್ ವಿಜ್ಞಾನ ಭವನ, ತೋಟಗಾರಿಕಾ ವಿಜ್ಞಾನಗಳ ಕಾಲೇಜು ಮಹಾದ್ವಾರ, ಜಿ.ಕೆ.ವಿ.ಕೆ ಆವರಣ ದೊಡ್ಡಬೆಟ್ಟಹಳ್ಳಿ ಬಸ್ ನಿಲ್ದಾಣ, ವಿದ್ಯಾರಣ್ಯಪುರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ಅರ್ಜಿಯನ್ನು ಗೂಗಲ್ https://forms.gle/2qH2JmtMfCBFq7zv5 ನಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್ ಸೈಟ್: kstacademy.in ಅಥವಾ ದೂರವಾಣಿ ಸಂಖ್ಯೆ: ೦೮೦–೨೯೭೨೧೫೫೦ ಮೂಲಕ ಸಂಪರ್ಕಿಸಬಹುದು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ತಾಯಿಯ ಎದೆ ಹಾಲು ಮಗುವಿಗೆ ಅಮೃತಕ್ಕೆ ಸಮಾನ: ಡಾ.ವಿಜಯಾ.ಕೆ



ರಾಯಚೂರು,ಆ.೦೨:- ಹೆರಿಗೆಯಾದ ನಂತರ ಒಂದು ಗಂಟೆಯೊಳಗೆ ಮಗುವಿಗೆ ತಾಯಿಯ ಎದೆ ಹಾಲನ್ನುಣಿಸಬೇಕು ಇದರಲ್ಲಿ ಕೊಲೊಸ್ಟ್ರಮ ಪ್ರಾಮುಖ್ಯತೆ ಹೊಂದಿರುತ್ತದೆ. ತಾಯಿಯ ಎದೆ ಹಾಲನ್ನು ಆರು ತಿಂಗಳುಗಳವರೆಗೆ ನೀಡಬೇಕು, ಎದೆ ಹಾಲನ್ನು ಹೊರತುಪಡಿಸಿ ಬೇರೆ ಯಾವುದೇ ಇನ್ನಿತರ ಪಾನೀಯಗಳನ್ನು ನೀಡಬಾರದು. ಮಗುವಿಗೆ ತಾಯಿಯ ಎದೆ ಹಾಲನ್ನು ನೀಡುವುದು ಪ್ರತಿಯೊಬ್ಬ ತಾಯಿಯ ಕರ್ತವ್ಯವಾಗಿದೆ ಎಂದು ನಗರ ಪ್ರಸೂತಿ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ.ವಿಜಯಾ.ಕೆ ಅವರು ಹೇಳಿದರು.

ಅವರು ಆ.೦೧(ಮಂಗಳವಾರ)ದಂದು ನಗರದ ನಗರ ಪ್ರಸೂತಿ ಕೇಂದ್ರದಲ್ಲಿ ವಿಶ್ವಸ್ತನ್ಯ ಪಾನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕೆಲವೊಬ್ಬರು ತಮ್ಮ ಸೌಂದರ್ಯ ಹಾಳಾಗುತ್ತದೆ ಎಂದು ತಿಳಿದುಎದೆ ಹಾಲು ಕುಡಿಸುವುದನ್ನು ಬಿಡಿಸುತ್ತಾರೆ. ಆದರೆ ಹಾಗೆ ಮಾಡುವುದು ಸರಿಯಾದ ಕ್ರಮವಲ್ಲ, ತಾಯಿಯ ಎದೆ ಹಾಲು ಮಗುವಿಗೆ ಅಮೃತಕ್ಕೆ ಸಮಾನ ಯಾಕೆಂದರೆ ತಾಯಿಯ ಎದೆ ಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿ ಮೇಲೆ ಯಾವುದು ಇಲ್ಲ. ಹಾಗೂ ಮಗುವಿಗೆ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದರು. ವಿಶ್ವಸ್ತನ್ಯಪಾನ ಸಪ್ತಾಹ ಆ.೦೧ ರಿಂದ ಆ.೦೭ರ ವರೆಗೆ ನಡೆಯುತ್ತದೆ ಎಂಬ ಮಾಹಿತಿಯನ್ನು ತಾಯಂದಿರಿಗೆ ನೀಡಿದರು.

ಇದೇ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಎಂ.ಡಿ ಶಾಕೀರ ಅವರು ಮಾತನಾಡಿ, ಆರು ತಿಂಗಳುಗಳವರೆಗೆ ಮಕ್ಕಳಿಗೆ ಕೇವಲ ಎದೆ ಹಾಲು ಉಣಿಸುವ ಮೂಲಕ ಮಗುವಿಗೆ ನ್ಯೂಮೋನಿಯಾ,ಅತಿಸಾರಭೇದಿ, ಅಪೌಷ್ಠಿಕತೆ ಇವುಗಳಿಂದ ತಡೆಗಟ್ಟಲು ಸ್ತನ್ಯಪಾನ ಅತ್ಯಂತ ಮಹತ್ವ ಪೂರ್ಣವಾಗಿದೆ ಎಂದರು.

ನಂತರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಲಕ್ಷ್ಮೀ ಮುಂಡಾಸ್ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಕೆಲಸ ಮಾಡುವ ಮಹಿಳೆಯರು ಎದೆ ಹಾಲುಣಿಸುವದರ ಕಡೆ ಹೆಚ್ಚಿನ ಗಮನಹರಿಸುವುದಿಲ್ಲ ಇದರಿಂದಾಗಿ ಮಗು ರೋಗಕ್ಕೆ ತುತ್ತಾಗುತ್ತದೆ. ಅದಕ್ಕಾಗಿ ತಾಯಿಯ ಎದೆ ಹಾಲು ಕುಡಿಸುವದರಿಂದ ಮಗು ಮಾನಸಿಕವಾಗಿ ದೈಹಿಕವಾಗಿ ಬೆಳೆಯುತ್ತದೆ. ಯಾವುದೇ ರೀತಿಯ ಮೂಢನಂಬಿಕೆಗೆ ಒಳಗಾಗಬಾರದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶಶಿಕಲಾ, ಡಾ. ಕಾವ್ಯ, ಡಾ. ಚೇತನಾ, ಮಲ್ಲೇಶ್ವರಿ ಸೇರಿದಂತೆ ಆಶಾ ಕಾರ್ಯಕರ್ತೆಯರು ನಗರ ಪ್ರಸೂತಿ ಕೇಂದ್ರದ ಸಮಸ್ತ ಸಿಬ್ಬಂದಿ ವರ್ಗದವರು ಜಹೀರಬಾದ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಶ್ವೇತಾಕುಮಾರ ಯಕ್ಷಗಾನ ಪ್ರದರ್ಶನ




ದಾವಣಗೆರೆ: ಇತ್ತೀಚೆಗೆ ರಂಗ ಪ್ರತಿಭಾ (ರಿ) ತಂಡದವರಿಂದ ಹಾಗೂ ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ ಪಂಚಲಿಂಗೇಶ್ವರ ದೇವಸ್ಥಾನದ ಆವರಣ, ಮುನವಳ್ಳಿ ಯಲ್ಲಿ ಶ್ವೇತಾಕುಮಾರ; ಎಂಬ ಯಕ್ಷಗಾನ ಪ್ರಸಂಗವು ಪ್ರದರ್ಶನಗೊಂಡಿತು.

ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀಪಾದ ಹೆಗಡೆ ಬಾಳೆಗದ್ದೆ, ಕು. ಶ್ರೀಕಲಾ ಎಸ್.ಹೆಗಡೆ, ಮದ್ದಳೆಯಲ್ಲಿ ಶ್ರೀಪಾದ ಭಟ್ ಮೂಡಗಾರು, ಶ್ರೀ ಗಣಪತಿ ದುರ್ಗದ್, ಚಂಡೆಯಾಗಿ ಶ್ರೀ ಉಮೇಶ್ ಹೆಗಡೆ, ಸ್ತ್ರೀ ವೇಶಧಾರಿಯಾಗಿ ಶ್ರೀ ಪ್ರಶಾಂತ ಭಟ್, ಹಾಸ್ಯ ಪಾತ್ರದಲ್ಲಿ ಶ್ರೀ ನಾಗರಾಜ ಹೆಗಡೆ ಹಾಗೂ ಮುಮ್ಮೇಳದಲ್ಲಿ ಶ್ರೀ ಮಂಜುನಾಥ ಹೆಗಡೆ, ಶ್ರೀ ದಯಾನಂದ ಹೆಗಡೆ, ಶ್ರೀ ಮಂಜುನಾಥ ಆಚಾರಿ, ಶ್ರೀ ಬಿ.ಜಿ. ಹೆಗಡೆ, ಶ್ರೀ ಕೃಷ್ಣ ವಾನಳ್ಳಿ, ರಾಜೇಶ್ ಶಾಸ್ತ್ರೀ, ಶ್ರೀ ಲಕ್ಷಣ್ ಪಟಗಾರ, ಶ್ರೀ ಆದರ್ಶ ಹೆಗಡೆ, ಶ್ರೀ ಭರತ ನಾಯ್ಕ, ಕು.ಮೈತ್ರಿ ನಾಯ್ಕ, ಶ್ರೀ ರವಿ ಹೆಗಡೆ, ಶ್ರೀ ಗೌತಮ್ ಹೆಗಡೆ, ಶ್ರೀ ಚಿನ್ಮಯ ಹೆಗಡೆ, ಶ್ರೀ ರವಿಕಿರಣ ಭಟ್ ಇವರುಗಳಿಂದ ಯಕ್ಷಗಾನ ಪ್ರಸಂಗವು ಯಶಸ್ವಿಯಾಗಿ ನೆರವೇರಿಸಿದರು.

## ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಲು ಎಲ್ಲರ ಸಹಕಾರ ಅಗತ್ಯ: ಡಾ. ವೆಂಕಟೇಶ್ ಎಲ್.ಡಿ

ದಾವಣಗೆರೆ; ಆಗಸ್ಟ್.೦೨ : ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಲು ಎಲೆಲರ ಸಹಕಾರ ಅಗತ್ಯ ಎಂದು ಅವರಗೊಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಆಡಳಿತ ವೈದ್ಯಾಧಿಕಾರಿ ಡಾ. ವೆಂಕಟೇಶ್ ಎಲ್.ಡಿ ತಿಳಿಸಿದರು.

ಬುಧವಾರ ಸರ್ಕಾರಿ ಪ್ರೌಢಶಾಲೆ ಅವರಗೊಳ್ಳದಲ್ಲಿ ನಡೆದ ಡೆಂಗ್ಯೂ, ಚಿಕ್ಕನ್ ಗುನ್ಯಾ, ಮಲೇರಿಯಾ ವಿರೋಧಿ ಮಾಸಾಚರಣೆ ಹಾಗೂ ಕ್ಷಯ ರೋಗದ ಲಕ್ಷಣಗಳ ಕುರಿತು ಅವರು ಮಾತನಾಡಿದರು.

ಸೊಳ್ಳೆಯಿಂದ ಹರಡುವ ಒಂದು ಸಾಂಕ್ರಾಮಿಕ ರೋಗವಾದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ಮೆದುಳು ಜ್ವರವು ಅನಾಫಿಲಿಸ್ ಹೆಣ್ಣು ಸೊಳ್ಳೆಯಿಂದ ಹರಡುತ್ತದೆ.

ಡೆಂಗ್ಯೂ , ಚಿಕ್ಕನ್ ಗುನ್ಯಾ, ಮಲೇರಿಯಾ ರೋಗದ ಲಕ್ಷಣಗಳು: ತೀವ್ರ ಜ್ವರ, ತಲೆನೋವು, ಗಂಧೆಗಳು, ಕಣ್ಣಿನ ಹಿಂಭಾಗ ನೋವು, ಮೈ ಕೈ ನೋವು, ಕೀಲು ಮೂಳೆ ನೋವು, ಕಾಲು ಬಾವು, ಚಳಿಯ ಹಂತ, ಬಿಸಿ ಜ್ವರದ ಹಂತ, ಬೆವರಿಕೆಯ ಹಂತ ಜೊತೆಗೆ ತಲೆನೋವು, ನಡುಕ ಈ ಲಕ್ಷಣಗಳು ಪ್ರತಿದಿನ ಅಥವಾ ದಿನ ಬಿಟ್ಟು ದಿನ ಕಾಣಿಸಿಕೊಳ್ಳಬಹುದು ಕೆಲವೊಂದು ಪ್ರಕರಣಗಳಲ್ಲಿ ತಲೆನೋವು ಮತ್ತು ಸುಸ್ತು ಮಾತ್ರ ಕಾಣಿಸಿಕೊಳ್ಳಬಹುದು, ಕ್ಷಯ ರೋಗದ ಲಕ್ಷಣಗಳಾದ ಎರಡು ವಾರಕ್ಕಿಂತ ಹೆಚ್ಚು ಕೆಮ್ಮು. ರಾತ್ರಿ ವೇಳೆ ಜ್ವರ . ಬೆವರುವಿಕೆ. ಹಸಿವು ಆಗದಿರುವುದು. ತೂಕ ಕಡಿಮೆ ಆಗಿರುವುದು. ಕಫಾದಲ್ಲಿ ರಕ್ತ ಕಾಣಿಸಿಕೊಳ್ಳುವುದು ಇವುಗಳು ಕ್ಷಯರೋಗದ ಲಕ್ಷಣಗಳಾಗಿರುತ್ತವೆ.

ನಿಯಂತ್ರಣ ಕ್ರಮಗಳು: ನೀರಿನ ಮೂಲಗಳಾದ ಡ್ರಮ್ಮು, ಬ್ಯಾರೆಲ್, ತೊಟ್ಟಿ, ನೀರಿನ ಗುಂಡಿ, ತೆಂಗಿನಕಾಯಿ ಚಿಪ್ಪು, ಟೀ ಲೋಟ, ಹೂವಿನ ಕುಂಡಲಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು ಹಾಗೂ ಮನೆಯ ಸುತ್ತಮುತ್ತ ಘನ ತ್ಯಾಜ್ಯ ಗಳನ್ನು ಸ್ವಚ್ಛಗೊಳಿಸುವುದು, ನಿಂತ ನೀರು ಸೊಳ್ಳೆಯ ತವರೂರು, ಸೊಳ್ಳೆಯ ಪರದೆ ಉಪಯೋಗಿಸುವುದು ಸೊಳ್ಳೆ ನಾಶಕ ದ್ರಾವಣ ಬಳಸುವುದು ಮುಂಜಾಗ್ರತಾವಾಗಿ ಸೊಳ್ಳೆಯ ಉತ್ಪನ್ನ ತಾಣಗಳನ್ನು ಟೆಮೀಫಾಸ್ ದ್ರಾವಣ ಬಳಸಬೇಕು ಹಾಗೂ ಲಾರ್ವಹಾರಿ ಮೀನುಗಳನ್ನು ದೊಡ್ಡ ತೊಟ್ಟಿಗಳಲ್ಲಿ ಬಿಡುವ ಮೂಲಕ ಸೊಳ್ಳೆ ಲಾರ್ವಗಳನ್ನು ನಾಶಗೊಳಿಸುತ್ತವೆ ಎಂದು ತಿಳಿಸಿಕೊಟ್ಟರು.

ಶಾಲಾ ಮಕ್ಕಳಿಂದ ಗ್ರಾಮದಲ್ಲಿ ಜಾಥಾ ಮಾಡುವ ಮೂಲಕ ಸೊಳ್ಳೆಯಿಂದ ಹರಡುವ ಸಾಂಕ್ರಾಮಿಕ ರೋಗಗಳ ಕುರಿತು ಘೋಷವಾಕ್ಯಗಳನ್ನು ಕೂಗುತ್ತಾ ಗ್ರಾಮದಲ್ಲಿ ಗ್ರಾಮಸ್ಥರಿಗೆ ಅರಿವು ಮೂಡಿಸಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಚಂದ್ರಪ್ಪ ಬಿ, ಸದಸ್ಯ ಜಿ.ಟಿ.ವೀರಣ್ಣ, ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತರು, ಪ್ರೌಢ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಎನ್ ಎಸ್ ಎಸ್ ಉದ್ಘಾಟನೆ



ದಾವಣಗೆರೆ: ನಗರದ ಕಸ್ತೂರಬಾ ಪದವಿ ಪೂರ್ವ ಕಾಲೇಜಿನಲ್ಲಿಇಂದು ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಎನ್ ಎಸ್ ಎಸ್ ೨೦೨೩-೨೪ ನೇ ಸಾಲಿನ ಕಾರ್ಯಚಟುವಟಿಕೆ ಉದ್ಘಾಟನೆಯನ್ನು ಮಾಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಮಾರುತಿ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಶ್ರೀ ಪಂಚಾಕ್ಷರಪ್ಪ ರವರು ವಿದ್ಯಾರ್ಥಿಗಳಿಗೆ ಶಿಸ್ತು ಬೆಳೆಸಿಕೊಳ್ಳಲು ಎನ್ ಎಸ್ ಎಸ್ ನೆರವಾಗುತ್ತದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಶ್ರೀ ಬಸವರಾಜ ಮಾಗನೂರ ರವರು ಎನ್ ಎಸ್ ಎಸ್ ಮನುಷ್ಯನನ್ನುನಿಸ್ವಾರ್ಥವಾಗಿ ಸೇವೆ ಸಲ್ಲಿಸಲು ಪ್ರೇರೇಪಿಸುತ್ತದೆ.ಆದುದರಿಂದವಿದ್ಯಾರ್ಥಿ ಜೀವನದಲ್ಲಿ ನೀವು ಎನ್ ಎಸ್ ಎಸ್ ಕಾರ್ಯಕರ್ತರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಬೆಳೆಯುತ್ತದೆ, ರಾಷ್ಟ್ರಾಭಿಮಾನ ಬೆಳೆಯುತ್ತದೆ ಎಂದು ಹೇಳಿದರು. ನಿಟ್ಟುವಳ್ಳಿ ಶ್ರೀಮಾರುತಿಪ್ರೌಢಶಾಲೆಯ ಶ್ರೀಓಂಕಾರನಾಯ್ಕರವರು ಅತಿಥಿಗಳಾಗಿ ಆಗಮಿಸಿ ಚಿತ್ರ ಗೀತೆಗಳು ಮತ್ತುಭಾವಗೀತೆಗಳನ್ನುಹಾಡಿದರ.ಉಪನ್ಯಾಸಕರಾದ ಶ್ರೀ ವೀರಪ್ಪ, ವಿಶ್ವ ಕುಮಾರ್, ನವೀನ್ ಪಾಟೀಲ್, ಎಸ್ ವಿ ಪಾಟೀಲ್, ಭರಮಗೌಡ ಉಪಸ್ಥಿತರಿದ್ದರು.ಎನ್ ಎಸ್ ಎಸ್ ಅಧಿಕಾರಿ ಎಸ್. ಜಿ. ನಾಗರಾಜ್ ಪ್ರಾಸ್ತಾವಿಕ ಭಾಷಣ ಮಾಡಿದರು.

## ನೊಂದಣಿ ಕಛೇರಿಯ ಹಣೆ ಬರಹ ಬಿಚ್ಚಿಟ್ಟ ಗುರು ಗಂಗನ್ನವರ

ಮೂಡಲಗಿಯಲ್ಲಿ ಉಪ ನೊಂದಣಿ ಕಛೇರಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಏಜೆಂಟರ ಹಾವಳಿಯಿಂದ.ಏಜೆಂಟರ ಹಾವಳಿಯಿಂದ ಜನರು ಕಂಗಾಲಾಗಿದ್ದಾರೆ.ಪ್ರತಿಯೊಂದು ಟೇಬಲಗೆ ಕೊಡಬೇಕು ಹಪ್ತಾ...ಸರ್ಕಾರದ ಎಲ್ಲ ನಿಯಮಗಳನ್ನು ಗಾಳಿಗೆ ತೂರಿದ್ದಾರೆ ನೊಂದಣಿ ಕಛೇರಿಯಲ್ಲಿ. ದಾಖಲೆ ಇಲ್ಲದಿದ್ದರು ನೊಂದಣಿ ಮಾಡಿ ಕೊಡುತ್ತಾರೆ.ಹಗಲು ದರೋಡೆ ಬೇಕಾಬಿಟ್ಟಿಯಾಗಿ ನಡೆದರು,ಮೇಲಾಧಿಕಾರಿಗಳು ಕಣ್ಣಿದ್ದು ಕುರುಡರಾಗಿದ್ದಾರೆ. ಬೇಡಿ ಬೇಡಿ ತಂದ ಕಛೇರಿ ಈಗ ಲಂಚ ಬಾಕರು ಅಡ್ಡ ಆಗಿದ್ದೆ!ತಾಲೂಕಿನ ಹೋರಾಟಗಾರರು ಮತ್ತು ಶಾಸಕರು ಮೌನ ಮುರಿಯಬೇಕು ಬಡವರಿಗೆ ನ್ಯಾಯ ಸಿಗಬೇಕು ಎಂದು ಗುರು ಗಂಗನ್ನವರ ಸಾಮಾಜಿಕ ಹೋರಾಟಗಾರ ಹೇಳಿದ್ದಾರೆ.




ಮೂಡಲಗಿ ನೊಂದಣಿ ಕಛೇರಿಯಲ್ಲಿ ಹಣ ಕೊಟ್ಟರೆ ಕೆಲಸ

ಮೂಡಲಗಿ: ಆ,೦೧-ಪಟ್ಟಣದ ನೊಂದಣಿ ಕಛೇರಿಯ ಆರಂಭದಲ್ಲಿಯೇ ಅವಾಂತರ, ಕೇವಲ ಏಳು ತಿಂಗಳಲ್ಲಿ ಅಂದ್ರೆ ಡಿಸೆಂಬರ್,೨೦-೨೦೨೨ ರಂದು ಉದ್ಘಾಟನೆ ಆಗಿದ್ದ ನೊಂದಣಿ ಕಛೇರಿಯಲ್ಲಿ ಭ್ರಷ್ಟಾಚಾರದ ಹೊಗೆ.ಲಂಚದ ಮೂಲಕವೇ ಕೆಲಸ ಮಾಡಿಕೊಳ್ಳಬೇಕು ಅನ್ನುವಷ್ಟು ಕೆಲ ಕಛೇರಿಗಳು ಸೂಚಿಸುತ್ತವೆ.ನೊಂದಣಿ ಕಛೇರಿ ಅಂದ್ರನ ಹಣದ ಸುರಿಮಳೆ,ಅಲ್ಲಿ ಲೆಕ್ಕವಿಲ್ಲದಷ್ಟು ಹಣದ ವ್ಯವಹಾರ ನಡೆಯುತ್ತದೆ. ದಲಾಳಿಗಳ ಅತಿಯಾಗಿ ಹಣ ವಸೂಲಿಗ ಮಾಡುತ್ತಾರೆ ಎಂದು ಸಾರ್ವಜನಿಕ ಆಕ್ರೋಶಕ್ಕೂ ಕಾರಣರಾಗಿದ್ದಾರೆ.ನೊಂದಣಿ ಕಛೇರಿಯ ಮುಖ್ಯಾಧಿಕಾರಿಯಾದ ಹರಿಯಪ್ಪ ಸರಿಯಾದ ಸಮಯಕ್ಕೆ ಬರುವುದಿಲ್ಲ ಅನ್ನುವುದು ಇನ್ನೊಂದು ಗುಮಾಣಿ.ಕೆಲ ಸರ್ಕಾರಿ ಅಧಿಕಾರಿಗಳಿಗೆ ಕೊಂಬು ಬಂದಿರುತ್ತಾವೆ.ಕಛೇರಿಗೆ ಬರುವ ವ್ಯಕ್ತಿಗಳ ವೇಷಭೂಷಣ ನೋಡಿ ಮರ್ಯಾದೆ ಕೊಡುತ್ತಾರೆ ಅಧಿಕಾರಿಗಳು ಇಂದಿಗೂ.ಪಾಪ ಬಡವ ಬಂದರೆ ಅಲ್ಲಿರು ಒಬ್ಬ ಆಯಾ ಕೆಲಸಾ ಮಾಡುವವನು ಕಿಮ್ಮತ್ತ ಕೊಡಾಂಗಿಲ್ಲ.ಬಂದ ಜನರನ್ನು ನಾಳೆ ಬಾ...ಮಧ್ಯಾಹ್ನ ಬಾ...ವಿನಾಕಾರಣವಾಗಿ ಅವರನ್ನು ಅಡ್ಡಾಡಿಸಿ ಬೀಡುವುದು .ಸಿಸಿ ಕ್ಯಾಮರಾ ಅಳವಡಿಕೆ ಇಲ್ಲ ಏಕೆ?.ಭ್ರಷ್ಟಾಚಾರ ಮುಕ್ತ ಅಂತ ನಾಯಕರು ಹೇಳುತ್ತಾರೆ.ನೊಂದಣಿ ಕಛೇರಿ ಲಂಚ ವಸೂಲಿಗೆ ನಿಂತಹಾಗೆ ಆಗಿದೆ!ಜನರು ಮತ್ತು ಸಂಘಟನೆಗಳು ರೊಚ್ಚಿಗೇಳುವ ಮೊದಲೇ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿದರೆ ಒಳ್ಳೆಯದು.

## ಪ್ರವೇಶಾತಿ ಪ್ರಚಾರ ಆಂದೋಲನಕ್ಕೆ ಚಾಲನೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಪ್ರಚಾರ ಆಂದೋಲನಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ ಅವರು ನಿನ್ನೆ ( ಆ.೧ ರಂದು) ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಚಾಲನೆ ನೀಡಿದರು.

ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶೈಕ್ಷಣಿಕ ವಂಚಿತರು, ಸಮಾಜದ ಕೆಳಸ್ಥರದಲ್ಲಿರುವವರು, ಶೋಷಿತರು, ವೃದರು, ಮಹಿಳೆಯರು ಮತ್ತು ಅಂಗವಿಕಲರಿಗೆ, ಶಿಕ್ಷಣ ನೀಡುವ ಮುಖಾಂತರ ಶೈಕ್ಷಣಿಕ ಕಾಮಧೇನು ಎನಿಸಿಕೊಂಡಿದೆ.ಸಾಂಪ್ರದಾಯಿಕ ವಿ.ವಿಗಳಿಗೆ ಸರಿಸಮಾನವಾಗಿ ತಾಂತ್ರಿಕತೆಯ ಜೊತೆಯಲ್ಲಿ ಪ್ರವೇಶಾತಿ ನೀಡುತ್ತಿರುವ ವಿ.ವಿಯು, ಅತಂತ್ಯ ಕಡಿಮೆ ದರದಲ್ಲಿ ನೀಡುತ್ತಿರುವ ಶೈಕ್ಷಣಿಕ ಸವಲತ್ತನ್ನು ಜಿಲ್ಲೆಯ ಪ್ರತಿಯೊಬ್ಬರು ಸದ್ಬಳಕೆ ಮಾಡಿಕೊಳ್ಳಬೇಕೆಂಬ ಕರೆ ನೀಡಿದರು.

ಮಂಡ್ಯ ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಮಿಲನ ಆರ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ದೇಶದ ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅಗ್ರಪಂತಿಯಲ್ಲಿದ್ದು, ಶೈಕ್ಷಣಿಕ ಸ್ಪರ್ಧೆಯಲ್ಲಿ ತಾಂತ್ರಿಕ ಸವಲತ್ತುಗಳನ್ನು ನೀಡುವ ಮೂಲಕ ಸಾಂಪ್ರದಾಯಿಕ ಶಿಕ್ಷಣಕ್ಕೆ ಸೆಡ್ಡು ಹೊಡೆದು ನಿಂತಿದೆ. ಜಿಲ್ಲೆಯ ಶೈಕ್ಷಣಿಕ ಅಭಿವೃದ್ದಿಯ ಮಾಪನಕ್ಕೆ ಕೆ.ಎಸ್.ಒ.ಯು ಕೊಡುಗೆಯನ್ನು ಜಿಲ್ಲೆಯ ಪ್ರತಿಯೊಂದು ಕುಟುಂಬವು ಸಕಾರಾತ್ಮಕವಾಗಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಇದರ ಜೊತೆಯಲ್ಲಿ ಪ್ರಾದೇಶಿಕ ಕೇಂದ್ರವು ಸೇರಿದಂತೆ, ನಗರದ ಹಲವು ಪ್ರಮುಖ ಸ್ಥಳಗಳಲ್ಲಿ ವಾಹನದ ಮೂಲಕ ಎಲ್.ಇ.ಡಿ ಪರದೆಯಲ್ಲಿ ಶೈಕ್ಷಣಿಕ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತ್ತು. ಈ ಸಂದರ್ಭದಲ್ಲಿ ಪ್ರಚಾರ ಆಂದೋಲನ ಸಂಯೋಜಕರಾದ ಸಿದ್ದೇಗೌಡ, ಪ್ರಾದೇಶಿಕ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಿಶ್ವ ಸ್ತನ್ಯಪಾನ ಸಪ್ತಾಹ ದಿನಾಚರಣೆ ಕಾರ್ಯಕ್ರಮ



ದಾವಣಗೆರೆ; ಆ. ೨ : ಮಗವನ್ನು ನ್ಯೂಮೋನಿಯಾ ಅತೀಸಾರ ಭೇದಿ ಅಪೌಷ್ಠಿಕತೆ ಇವುಗಳಿಂದ ತಡೆಗಟ್ಟಲು ಸ್ತನ್ಯಪಾನವು ಅತ್ಯಂತ ಮಹತ್ವಪೂರ್ಣ ಪಾತ್ರವಹಿಸುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ ಪಿ ಪಟಗೆ ತಿಳಿಸಿದರು.

ಬುಧವಾರ ಭಾಷಾ ನಗರದಲ್ಲಿರುವ' ಪ್ರಸೂತಿ ಆರೈಕೆ ಕೇಂದ್ರದಲ್ಲಿ ಜರುಗಿದ ವಿಶ್ವ ಸ್ತನ್ಯಪಾನ ಸಪ್ತಾಹ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ ಹೆರಿಗೆ ಪ್ರಮಾಣ ಹೆಚ್ಚಾಗಿದ್ದರೂ ಸಹ ತಾಯಿ ಮಗುವಿಗೆ ಎದೆ ಹಾಲು ಕುಡಿಸುವ ಪ್ರಮಾಣ ಕಡಿಮೆ ಆಗಿದೆ. ಮಗುವಿಗೆ ೬ ತಿಂಗಳವರೆಗೆ ಕೇವಲ ಎದೆ ಹಾಲನ್ನು ಮಾತ್ರ ಉಣಿಸಬೇಕು. ಇದರಿಂದ ಶಿಶುಗಳಿಗೆ ಬರುವಂತಹ ಸೋಂಕು ರೋಗಗಳನ್ನು ತಡೆಗಟ್ಟಿ, ಶಿಶು ಮರಣಗಳನ್ನು ತಪ್ಪಿಸಬಹುದು ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್.ಉಮಾಪತಿ ಎಲ್ಲಾ ತಾಯಂದಿರಿಗೆ ಸ್ತನ್ಯ ಪಾನವನ್ನು ಬೆಂಬಲಿಸುವಂತೆ ನಮ್ಮ ಆಸ್ಪತ್ರೆಯಲ್ಲಿ ಹೆರಿಗೆ ಸೇವೆಗಳಿಗೆ ದಾಖಲಾಗುವ ಎಲ್ಲಾ ತಾಯಂದಿರಿಗೂ ಸ್ತನ್ಯ ಪಾನವನ್ನು ಸಕ್ರಿಯವಾಗಿ ಬೆಂಬಲಿಸಲು ನಾನು ಬದ್ಧನಾಗಿರುತ್ತೇನೆ. ನಮ್ಮ ಆಸ್ಪತ್ರೆಯಲ್ಲಿ ಸ್ತನ್ಯಪಾನವನ್ನು ರಕ್ಷಿಸಲು ಉತ್ತೇಜಿಸಲು ಮತ್ತು ಬೆಂಬಲಿಸಲು ನನ್ನ ಕಡೆಯಿಂದ ಸಾಧ್ಯವಿರುವ ಎಲ್ಲಾ ಪ್ರಯತ್ನವನ್ನು ಮಾಡುತ್ತೇನೆ. ಪ್ರಸವ ನಂತರದ ಆರೈಕೆಯಲಿ ಆಸ್ಪತ್ರೆಯಲ್ಲಿದ್ದಾಗ ಕಡ್ಡಾಯವಾಗಿ ೬ ತಿಂಗಳು ಸಂಪೂರ್ಣ ಸ್ತನ್ಯಪಾನವನ್ನು ಅಭ್ಯಾಸ ಮಾಡಲು ತಾಯಂದಿರಿಗೆ ಬೆಂಬಲ ನೀಡುತ್ತೇನೆ ಎಂಬ ಪ್ರತಿಜ್ಞೆಯನ್ನು ಭೋಧಿಸಿದರು.

ಪ್ರಸೂತಿ ವೈದ್ಯಾಧಿಕಾರಿ ಡಾ. ರೇಖಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೆಂಕಟಾಚಲ ಕುಮಾರ್ .ಟಿ.ಎಸ್, ಆರೋಗ್ಯ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ವಿದ್ಯುತ್ ವ್ಯತ್ಯಯ

ದಾವಣಗೆರೆ; ಆ. ೨ : ೬೬/೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜಲಸಿರಿ ಯೋಜನೆ ವತಿಯಿಂದ ಕೆ.ಐ.ಯು.ಡ.ಬ್ಲ್ಯೂ.ಎಂ.ಐ.ಪಿ ಯೋಜನೆಯಡಿ ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಆಗಸ್ಟ್ ೩ ರಂದು ಬೆಳಿಗ್ಗೆ ೧೦ ರಿಂದ ಸಂಜೆ ೫ ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಎಫ್-೯ ಪಿ.ಜೆ ಬಡಾವಣೆ ಫೀಡರ್ ವ್ಯಾಪ್ತಿಯ ಪೋಲಿಸ್ ವಸತಿ ಗೃಹ, ಡಿ.ಎ.ಪಿ.ಆರ್ ಆಫೀಸ್, ಅರುಣ ಟಾಕೀಸ್ ವೃತ್ತ, ಹಳೆ ವಾಣಿಹೊಂಡ ಶೊರೂಂ, ಪಶುಸಂಗೋಪನ ಆಸ್ಪತ್ರೆ, ಮಜಿದ್ ಮಸೀದಿ, ಸಿತಾರ ಹೋಟಲ್, ಜಿ.ಎಂ.ವಾಲ್, ಫಿಶ್ ಮಾರ್ಕೆಟ್, ಪಿಸಾಳೆ ಕಾಪೌಂಡ, ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

## ಅನುಪಯುಕ್ತ ಸಾಮಗ್ರಿಗಳ ಬಹಿರಂಗ ಹರಾಜು

ಬೆಂಗಳೂರು ನಗರ ಜಿಲ್ಲೆ, ಆಗಸ್ಟ್ ೦೨: ಹೊಸಕೆರೆಹಳ್ಳಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಮ)ಯಲ್ಲಿ ಆಗಸ್ಟ್ ೧೭ರಂದು ಬೆಳಗ್ಗೆ ೧೧.೦೦ ಗಂಟೆಗೆ ಅನುಪಯುಕ್ತ ಸಾಮಗ್ರಿಗಳ ಬಹಿರಂಗ ಹರಾಜು ನಡೆಯಲಿದ್ದು, ಆಸಕ್ತ ಜಿ.ಎಸ್.ಟಿ ನೋಂದಣಿ ಬಿಡ್ಡುದಾರರು ಭಾಗವಹಿಸಬಹುದು.

ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಮಹಿಳಾ), ಹೊಸಕೆರೆಹಳ್ಳಿ, ಬೆಂಗಳೂರು- ೫೬೦೦೮೫ ಇವರ ಹೆಸರಲ್ಲಿ ರೂ.೩೦೦೦ ಡಿಡಿ ಪಡೆದು ಹರಾಜಿನಲ್ಲಿ ಭಾಗವಹಿಸಬಹುದು. ಬಿಡ್ಡುದಾರರು ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಪ್ರಾಚಾರ್ಯರ ಕಛೇರಿ, ಸರ್ಕಾರಿ ತರಬೇತಿ ಸಂಸ್ಥೆ(ಮ), ಹೊಸಕೆರೆಹಳ್ಳಿ, ಬೆಂಗಳೂರು-೫೬೦೦೮೫ ಅಥವಾ ದೂರವಾಣಿ ಸಂಖ್ಯೆ ೦೮೦-೨೬೪೨೩೧೭೭, ಮೊಬೈಲ್ ಸಂಖ್ಯೆ ೯೮೦೨೦೦೧೬೫೪ ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ತರಬೇತಿ ಸಂಸ್ಥೆ (ಮ)ಯ ಪ್ರಾಚಾರ್ಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ಯಾರಂಟಿ ಯೋಜನೆಗಳ ಜಾರಿಯಿಂದ ಕರ್ನಾಟಕ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎನ್ನುವ ಪ್ರಧಾನಿ ಅವರ ಆರೋಪ ಪೂರ್ತಿ ಸುಳ್ಳಾಗಿದೆ.ಸಿ.ಎಂ

ನಾವು ಬಜೆಟ್ ನಲ್ಲಿ ಐದು ಗ್ಯಾರಂಟಿಗಳಿಗೆ ಹಣ ಒದಗಿಸುವ ಜತೆಗೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ೭೬ ಭರವಸೆಗಳಿಗೂ ಹಣ ನೀಡಿದ್ದೇವೆ. ಇವೆಲ್ಲವೂ ಎಲ್ಲಾ ಜಾತಿ, ಎಲ್ಲಾ ಧರ್ಮ, ಎಲ್ಲಾ ವರ್ಗದವರ ಬದುಕಿಗೂ ಸ್ಪಂದಿಸುವ ಯೋಜನೆಗಳಾಗಿವೆ. ಪ್ರತೀ ದಿನ ಒಂದೂವರೆ ಕೋಟಿಗೂ ಅಧಿಕ ಮಂದಿ ನಮ್ಮ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ದೇಶದ ಆರ್ಥಿಕತೆಯನ್ನು ಹಾಳು ಗೆಡವಿದ ಪ್ರಧಾನಮೋದಿ ಅವರು ಕರ್ನಾಟಕ ಮಾದರಿ ಅಭಿವೃದ್ಧಿಯನ್ನು ಅರ್ಥ ಮಾಡಿಕೊಳ್ಳಲಿ. ಇನ್ನಾದರೂ ದೇಶವನ್ನು ಸರಿ ದಾರಿಯಲ್ಲಿ ಮುನ್ನಡೆಸಲಿ.

## ಮೀನುಗಾರಿಕೆ ಇಲಾಖೆಯಿಂದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

ಶಿವಮೊಗ್ಗ, ಆಗಸ್ಟ್-೦೨ : ಮೀನುಗಾರಿಕೆ ಇಲಾಖೆಯು ೨೦೨೩-೨೪ನೇ ಸಾಲಿನಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ಟು/ ಫೈಬರ್ ಗ್ಲಾಸ್ ಹರಿಗೋಲು ವಿತರಣೆ, ಮೀನುಮರಿ ಖರೀದಿಗೆ ಸಹಾಯಧನ, ಕೆರೆ/ಜಲಾಶಯ ಅಂಚಿನಲ್ಲಿ ನಿರ್ಮಿಸಿರುವ ಕೊಳಗಳಲ್ಲಿ ಮೀನುಮರಿ ಪಾಲನೆಗೆ ಸಹಾಯ ಇತ್ಯಾದಿ ಯೋಜನೆಗಳಡಿ ಆಸಕ್ತ ಒಳನಾಡು ಮೀನುಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಸಂಬಂಧಪಟ್ಟ ತಾಲೂಕು ಮಟ್ಟದ ಕಚೇರಿಗಳನ್ನು ಸಂಪರ್ಕಿಸಿ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಆಗಸ್ಟ್-೧೯ರೊಳಗಾಗಿ ಸಲ್ಲಿಸುವಂತೆ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ www.fisheries.karnatakal.gov.in ರಲ್ಲಿ ಹಾಗೂ ಶಿವಮೊಗ್ಗ-೯೮೬೮೬೦೪೯೮೧, ಭದ್ರಾವತಿ-೯೭೪೩೩೭೦೮೧೫, ಶಿಕಾರಿಪುರ ಮತ್ತು ಸೊರಬ-೯೨೪೧೫೮೪೦೭೦, ಸಾಗರ-೯೫೩೮೦೪೪೩೬೫, ತೀರ್ಥಹಳ್ಳಿ-೮೫೪೯೯೩೪೪೧೧ ಗಳ ತಾಲೂಕು ಮೀನುಗಾರಿಗೆ ಸಹಾಯಕ ನಿರ್ದೇಶಕರುಗಳನ್ನು ಸಂಪರ್ಕಿಸುವುದು.

Printed at:S.K.Wadeyar, Published by:S.K.Wadeyar, and Owned by:S.K.Wadeyar
Printed at:**SUCHITHRAPRINTERS & PUBLISHERS #378/379, “MAYAGAPPA COMPLEX”** 1se Stage 6th Phase Industrial Town west of chord Road Rajajinagar Bengaluru-56644.Karnataka.
Published at:#378/379, “MAYAGAPPA COMPLEX” 1se Stage 6th Phase Industrial Town west of chord Road Rajajinagar Bengaluru-56644.Karnataka. Editor:S.K.Wadeyar,